ಮಾಡಲಾಗುವುದು. ಪ್ರಾಧ್ಯಾಪಕರ ಎಲ್ಲಾ ಹುದ್ದೆಗಳನ್ನು ಪದೋನ್ನತಿಯಿಂದ ತುಂಬಲಾಗುವುದು.

ಖಾಸಗೀ ಸಂಸ್ಥೆಗಳ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ. ಹಾಗೂ ಸರ್ಕಾರಿ ಅನುದಾನ ಪಡೆಯದ ಸಂಸ್ಥೆಗಳಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸಬೇಕೆಂದು ಸರ್ಕಾರಿ ನಿಯಮವಿಲ್ಲ. ಈ ವಿಷಯವು ಆಯಾ ಸಂಸ್ಥೆಗಳ ಆಡಳಿತ ಮಂಡಳಿಗಳ ವಿವೇಚನೆಗೆ ಒಳಪಟ್ಟಿರುತ್ತದೆ.

ಊ) ಕಾಲಕಾಲಕ್ಕೆ ಜಾರಿಯಲ್ಲಿರುವ ಸರ್ಕಾರದ ಮೀಸಲಾತಿ ನಿಯಮಗಳಿಗೆ ಅನುಗುಣವಾಗಿ ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆ ಮಾಡುವುದರಿಂದ ಸರ್ಕಾರಿ ಸಂಸ್ಥೆಗಳ ಎಲ್ಲಾ ಉಪನ್ಯಾಸಕರುಗಳ ಶೇ100 ಸಹಾಯಕ ಪ್ರಾಧ್ಯಾಪಕರ (ಶೇ50) ಹುದ್ದೆಗಳಿಗೂ ಈ ಕೆಳಕಂಡಂತೆ ಪ.ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಹ ವೈದ್ಯರನ್ನು ಆಯ್ಕೆ ಮಾಡಲಾಗುತ್ತದೆ.

1) ಪರಿಶಿಷ್ಟ ಜಾತಿ - 15ಶೇಕಡ ಸರ್ಕಾರಿ ಸಂಸ್ಥೆ
2) ಪರಿಶಿಷ್ಟ ಪಂಗಡ - 3ಶೇಕಡ ಗಳಲ್ಲಿ

ಖಾಸಗೀ ಸಂಸ್ಥೆಗಳ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.

---

**ವಿಷಯ:-** ರಾಜ್ಯದಲ್ಲಿ ಅಕ್ರಮವಾಗಿ ಮೂತ್ರಪಿಂಡ ವರ್ಗಾವಣೆ ಮಾಡಿರುವ ಪ್ರಕರಣ.

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 282(11)**

**ಶ್ರೀ ಎಂ.ಹೆಚ್.ಜಯಪ್ರಕಾಶ್ ನಾರಾಯಣ್(ಯಲಹಂಕ):-** ಮಾನ್ಯ ವೈದ್ಯಕೀಯ

ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಆಸ್ಪತ್ರೆಗಳಲ್ಲಿ ಕಾನೂನು ಬಾಹಿರವಾಗಿ ವೈದ್ಯರು ಎಷ್ಟು ಎಷ್ಟು ಅಕ್ರಮವಾಗಿ ಮೂತ್ರಪಿಂಡಗಳನ್ನು ಕಸಿ ಮಾಡಿದ್ದಾರೆ. ಪೂರ್ಣವಾದ ಮಾಹಿತಿಯನ್ನು ನೀಡುವುದು.

ಆ) ಈ ರೀತಿ ಕಾನೂನು ಬಾಹಿರವಾಗಿ ಕಸಿ ಮಾಡಿಸಿಕೊಂಡ ಮೂತ್ರಪಿಂಡಗಳ ಹಗರಣಕ್ಕೆ ಬಲಿಯಾಗಿರುವ ಮುಗ್ಧ ಜನರೆಷ್ಟು?

ಇ) ಈ ಹಗರಣಕ್ಕೆ ಸಂಬಂಧಪಟ್ಟ ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳ ವೈದ್ಯರುಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು?

ಉ) ಈ ಮೂತ್ರಪಿಂಡ ಹಗರಣಕ್ಕೆ ಸಂಬಂಧಪಟ್ಟ ಹಾಗೂ ಮೂತ್ರಪಿಂಡಗಳನ್ನು ಕಳೆದುಕೊಂಡ ಮುಗ್ಧ ಜನರಿಗೆ ಸರ್ಕಾರಿ ಹಾಗೂ ಖಾಸಗೀ ವೈದ್ಯಕೀಯ ಕ್ಷೇತ್ರಗಳು ಕೊಟ್ಟ ಪರಿಹಾರವೇನು?

---

**ಶ್ರೀ ಎ.ಬಿ.ಪಾಟೀಲ್(ವೈದ್ಯಕೀಯ ಶಿಕ್ಷಣ ಸಚಿವರು):-**

ಅ) ಪೋಲೀಸರ ವರದಿ ಪ್ರಕಾರ 5 ಪ್ರಕರಣಗಳು ಬೆಳಕಿಗೆ ಬಂದಿದೆ. ಪೋಲೀಸರಿಂದ ತನಿಖೆ ಜಾರಿಯಲ್ಲಿದೆ( ಈ ಬಗ್ಗೆ 80 ದೂರುಗಳು ಬಂದಿರುತ್ತವೆ).

ಆ) ಪೋಲೀಸರಿಂದಾ ತನಿಖೆ ನಡೆಯುತ್ತಿದೆ.

ಇ) ಒಬ್ಬರು ಸರ್ಕಾರಿ ವೈದ್ಯರು ಹಾಗೂ ಇಬ್ಬರು ಖಾಸಗೀ ವೈದ್ಯರು ಭಾಗಿಯಾಗಿರುವುದಾಗ ಆಪಾದಿಸಲಾಗಿದೆ.

ಈ) ಸರ್ಕಾರಿ ವೈದ್ಯರನ್ನು ಅಮಾನತ್ತಿನಲ್ಲಿಡಲಾಗಿದೆ ಹಾಗೂ ಖಾಸಗೀ ವೈದ್ಯರು ಕರ್ನಾಟಕ ಮೆಡಿಕಲ್ ಕೌನ್ಸಿಲ್ ವ್ಯಾಪ್ತಿಗೆ ಒಳಪಡುವುದರಿಂದ ಅವರುಗಳ ಮಾನ್ಯತೆಯನ್ನು ರದ್ದು ಮಾಡಲು ಕೌನ್ಸಿಲ್ ಕ್ರಮ ಕೈಗೊಂಡಿದೆ. ಪೋಲೀಸರು ಇವರನ್ನು ದಸ್ತಗಿರಿ ಮಾಡಿದ ನಂತರ ನ್ಯಾಯಾಲಯಗಳಿಂದ ಜಾಮೀನನ್ನು ಪಡೆದು ಬಿಡುಗಡೆ ಹೊಂದಿರುತ್ತಾರೆ.

ಉ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

---

**ವಿಷಯ:-** ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಬೋಧಕರನ್ನು ನೇಮಿಸುವುದು.

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 283(215)**

**ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್ (ಯಲಹಂಕ):-** ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರಿ ವೈದ್ಯಕೀಯ ಶಿಕ್ಷಣ, ದಂತ ವೈದ್ಯಕೀಯ, ಫಾರ್ಮಸಿ ಮತ್ತು ನರ್ಸಿಂಗ್ ಕಾಲೇಜುಗಳಲ್ಲಿ ಯಾವ ಯಾವ ವರ್ಗದಲ್ಲಿ ಬೋಧಕರ ಹುದ್ದೆಯನ್ನು ಇಂಡಿಯನ್ ಮೆಡಿಕಲ್ ಕೌನ್ಸಿಲ್‌ಗಳ ಪ್ರಕಾರ ಗೊತ್ತುಪಡಿಸಲಾಗಿದೆ?

---

**ಶ್ರೀ ಎ. ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು):-**

ಅ) 1) ಇಂಡಿಯನ್ ಮೆಡಿಕಲ್ ಕೌನ್ಸಿಲ್ ರೆಗ್ಯೂಲೇಷನ್ಸ್ ಪ್ರಕಾರ ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಗೊತ್ತುಪಡಿಸಲಾದ ಬೋಧಕ ಸಿಬ್ಬಂದಿ ಪ್ರಮಾಣ ಈ ಕೆಳಕಂಡಂತೆ ಇದೆ :-

(1) ಎಂ. ಬಿ. ಬಿ. ಎಸ್. ವಿದ್ಯಾರ್ಥಿಗಳಿಗೆ 10: 1 ರಂತೆ

(2) ಸ್ನಾತಕೋತ್ತರ ಡಿಗ್ರಿ ವಿದ್ಯಾರ್ಥಿಗಳಿಗೆ 1: 1 ರಂತೆ